ಸದರೀ ದರಖಾಸ್ತುದಾರನಾದ ಮುದ್ದಬಿಸಪ್ಪನ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ ತಿಂಗಳು 14ನೇ ತಾರೀಖಿನ ದಿನ ಕೇಳಿ ಸದರೀ ಯವನ ಹೆಸರಿಗೆ ಗಾರ್ಡಿಯ್ಯ. ಸರ್ಟಿಫಿಕೇಟ್ ಪಡಿಯತಕ್ಕ ಭಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಸರ್ಟಿಫಿಕೇಟನ್ನ ಕೊಡಿಸಕೂಡದೆಂಬುವದಕ್ಕೆ ತಕರಾರುವುಳ್ಳ ಹಕ್ಕುದಾರರು ಯಾರಾದರೂ ಇದ್ದಲ್ಲಿ ಕೋರ್ಟಿಗೆ ಹಾಜರಾಗಿ ತಿಳಿಸತಕ್ಕದ್ದಿಧೆಯಂದು ಯಿದರಿಂದ ತಿಳಿಸಲ್ಪಟ್ಟು ಯಿದೆ.

1887ನೇ ಇಸವಿ ಸೆಪ್ಟಂಬರ್ ತಿಂಗಳು 23ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೇ ಕೊಡೋಣಾಗಿದೆ.

ಸಿ. ಕೈನ್ಸ್,
ಸಬ್ ಜಡ್ಜ್.

ತುಮಕೂರು ಡಿಸ್ಟ್ರಿಕ್ಟ್.

ತಾರೀಖು 21ನೇ ಸೆಪ್ಟಂಬರ್ 1887.

ತಿಪ್ಟೂರು ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಬೇವಾರಸಾಗಿರತಕ್ಕ ಈ ಕೆಳಗೆ ವಿವರಿಸೋಣಾಗಿರುವ ದಸ್ತೈವಜನ್ನ ಹಾಜರ್ ಮಾಡಿದವರೇ ಆಗಲಿ ಅಥವಾ ಅವರಿಂದ ಕ್ರಮವಾಗಿ ಅಧಿಕಾರ ಹೊಂದಿದ ಮುತಾಲೀಕರು ಯಾ ಹಕ್ಕುದಾರ್ರೇ ಆಗಲಿ ಈ ನೋಟೀಸ್ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ತಿಪ್ಟೂರು ಸಬ್ ರಿಜಿಸ್ಟ್ರಾರಲ್ಲಿ ಹಾಜರಾಗಿ ಸದರೀ ದಸ್ತೈವಜನ್ನ ವಾಪಸ್ ಪಡಿಯಲೂ ತಪ್ಪಿದಲ್ಲಿ ಸ್ರ 1877ನೇ ಇಸವಿ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ 85ನೇ ಸೆಕ್ಷನ್ ಅನುಸರಿಸಿ ನಾಶ ಮಾಡಲ್ಪಡುವದು:—

ದಸ್ತೈವಜಿನ ನಂಬರ್.	ಹಾಜರಿಯ ತಾರೀಖು.	ಸದರಿ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾದ ತಾರೀಖು.	ಸದರಿ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಿಯ ತಾರೀಖು.	ದಸ್ತೈವಜನ್ನ ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜನ್ನ ಬರಸಿ ಕೊಂಡವರ ಹೆಸರು ಮತ್ತು ವಾಸಸ್ಥಳ.	ದಸ್ತೈವಜಿನ ಸ್ವಭಾವ ಮತ್ತು ಕಿಮ್ಮತ್ತು.
182 1885—86	8—8—88	15—8—88	29—8—88	ತಿಪ್ಟೂರು ತಾಲ್ಲೂಕು ನೊಣವಿನಕೆರೇ ಸಮ್ಮತು ಮಾಕನಹಳ್ಳಿ ಗ್ರಾಮಕ್ಕೆ ಸೇರಿದ ಚಿಕ್ಕಣ್ಣ ಕಟ್ಟಿ ಪಾಳ್ಯದಲ್ಲಿರುವ ಕಮಾಚಾರದ ಬಳೇ ಪುಟ್ಟೇರಯ್ಯನ ಮಗ ಚನ್ನಬಸಯ್ಯ	ತಿಪ್ಟೂರು ತಾಲ್ಲೂಕು ನೊಣವಿನಕೆರೇಯಲ್ಲಿರುವ ಹೊಸಮನೆ ನಾರಣಸಾಮಯ್ಯಂಗಾರ್	ತನ್ನ ಬಾಬತು ತಿಪ್ಟೂರು ತಾಲ್ಲೂಕು ನೊಣವಿನಕೆರೇ ಸಮ್ಮತು ವಿಗ್ನ ಸಂತೆ ಗ್ರಾಮದ ಕೆರೇಹಿಂದೆ ಇರುವ ಅಡಿಕೆ, ತೆಂಗೂ ಮಿಶ್ರವಾದ ಸರ್ವೇನಂಬರ್ 92 ಎಕರೆ 1 ಕುಂಟೆ 19 ಆಕಾರ 15 ರೂಪಾಯಿವುಳ್ಳ ತೋಟ ಆಧಾರದ ವಂದು ನೂರು ರೂಪಾಯಿನ ಕಂತು ಪತ್ರ.

ಪಿ. ಎ. ಕೃಷ್ಣಮೂರ್ತಿ, ರಿಜಿಸ್ಟ್ರಾರ್.

ಮೈಸೂರು ಡಿಸ್ಟ್ರಿಕ್ಟ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್‌ಯವರ ಕೋರ್ಟಿನಲ್ಲಿ.

1887ನೇ ಇಸವಿ ಅರ್ಜೀ ನಂಬರ್ 513.

ಮೃತಪಟ್ಟ ಗುಂಡಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ ರಾಜಪ್ಪ ಮೈನರ್ ಗಾರ್ಡಿಯ್ಯ ಮತ್ತು ತಾಯಿ ಮಾದಮ್ಮನು ಮೃತಪಟ್ಟ ಸದರೀ ಗುಂಡಪ್ಪನವರಿಗೆ ಮಗನು ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಮೈಸೂರು ಕಿಲ್ಲೇ ಸ್ಥಳದ ಮೈನರ್ ಗಾರ್ಡಿಯ್ಯ ಮಾದಮ್ಮನು ಸದರೀ ವಾಸಸ್ಥನಾಗಿ ಮೃತಪಟ್ಟ ಗುಂಡಪ್ಪನವರ ಜಿಂದಗೀ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್‌ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರೆಳಾದ ಮಾದಮ್ಮನವರ ಅರ್ಜೀಯನ್ನು 1887ನೇ ಇಸವಿ ಅಕ್ಟೋಬರ್ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೀ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುಂಡಪ್ಪನವರ ಆಸ್ತಿ

ಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿದೆ.

1887ನೇ ಯಿಸವಿ ಸೆಪ್ಟಂಬರು ತಿಂಗಳು 24ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಯಸ್. ಹೇಮಾಜಿರಾವ್,
ಡಿಸ್ಟ್ರಿಕ್ಟು ಜಡ್ಜ್.

ಮೈಸೂರು ಡಿಸ್ಟ್ರಿಕ್ಟು ಸಬ್ ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ಮೈಸೂರಲ್ಲಿರುವ ಸವಾರ್ ಇಲಾಖಾ ಪೇಷ್ಕಾರ್ ಮಂಡ್ಲಗಿರೀ ಕೃಷ್ಣರಾಯನ ವಿಷಯದಲ್ಲಿ—

ಸ್ ಸ್ 1887ನೇ ಇಸವಿ ದಿವಾಳೀ ಕೇಸ್ ನಂಬರ್ 142.

ಹುಕ್ಕುಂ.

ಮೇಲ್ಕಂಡ ಕೃಷ್ಣರಾಯನು ನಿರ್ಬಂಧದಿಂದ ಖುಲಾಸೇಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಕೃಷ್ಣರಾಯನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ನಾರಾಯಣರಾಯರನ್ನು ಮತ್ತು ಸದರೀಯವನ ಲೇಣೇದಾರ್‌ರಾದ 5ನೇ ಗೋಪಾಲಕಟ್ಟಿ ಖುದ್ದು ಹಾಜರು 14ನೇ ಕೃಷ್ಣಾಚಾರೀ ಕಡೇ ಫಸ್ಟ್‌ಗ್ರೇಡ್ ಪ್ಲೀಡರ್ ವೆಂಕೋಬರಾಯರು ಹಾಜರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್‌ರು ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ವಡೀಸ್ವಾಮಿರಾಯಚಾರಿ 2ನೇ ಸುಪ ತಕುಮೂರೀ ಬ್ಯಾಂಕ್ 3ನೇ ಖಾಶಿಂಸಾಬ್ 4ನೇ ಬುಡ್ಣಾಸಾಬಿ 6ನೇ ಮೈಸೂರು ಬ್ಯಾಂಕ್ 7ನೇ ಭಾಗೀರಥಿಬಾಯಿ 8ನೇ ಬಸಪ್ಪ 9ನೇ ಈತಮ್ಮ 10ನೇ ರಂಗಪ್ಪ 11ನೇ ಗೋವಿಂದಭೀಮಾಜಿ 12ನೇ ಮಲ್ಲಕಟ್ಟಿ 13ನೇ ಆಲಪ್ಪ 15ನೇ ಶೇಷಗಿರಿರಾವ್ 16ನೇ ದೇವಾಜೀ ಜೋ ಲಾಜೀ ತಂದೇ ನವಲಾಜಿ 17ನೇ ರಂಗಪ್ಪ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಪೇಷ್ಕಾರ್ ಕೃಷ್ಣರಾಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನ ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟುನಿರ್ಬಂಧಸಡುವ ಜವಾಬ್‌ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂಬು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ ಸ್ 1887ನೇ ಇಸವಿ ಆಗಸ್ಟು 31ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರ್‌ರು ಅಥವಾ ದಾವಾದಾರ್‌ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಹೊಬಳಿಗಳು.			ಯಾವಾಗ ಪೇಷ್ಕಾರ್ ಹೊಂದಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇ ನಾದರೂ ಇದ್ದರೆ.	ಷರಾ.
1	ಶಿವಮೊಗ್ಗೆಲಿರುವ ವಡೀಸ್ವಾಮಿರಾಯಾಚಾರಿ ..	89	3	4	..	ಡಿಕ್ರೀ ಬಾಬತು	
12	ಮೈಸೂರಲ್ಲಿರುವ ಮಲ್ಲಕಟ್ಟಿ ..	44	0	8	..	ಡಿಟೋ	
13	ಡಿಟೋ ಕುರ್ದೂಬಾನ ಮಗ ಆಲಪ್ಪ ..	33	8	6	..	ಡಿಟೋ	
14	ಹೊಳೇನರಸೀಪುರದ ಕೃಷ್ಣಾಚಾರಿ ..	212	0	0	..	ಡಿಟೋ	
15	ಶಿವಮೊಗ್ಗೆಯಲ್ಲಿರುವ ತಿಮ್ಮಯ್ಯ ಘಾತಿ ವಾರಸ್ದಾರ್ ಶೇಷಗಿರಿರಾವು ..	251	0	0	..	ಡಿಟೋ	
16	ಡಿಟೋ ವುರು ದೇವಾಜೀ ಜೋಲಾಜಿ ..	350	0	0	..	ಡಿಟೋ	
17	ಡಿಟೋ ರಂಗಪ್ಪ ..	30	0	6	..	ಡಿಟೋ	
		1019	13	0			